ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ರಾಜ್ಯದಲ್ಲಿ ತೆರಿಗೆ ಸುಧಾರಣೆ ಆಯೋಗವನ್ನು ಒಂದು ವರ್ಷದ ಅವಧಿಗೆ ರಚಿಸಲಾಗಿದೆ. ಈ ಆಯೋಗದಲ್ಲಿ ಅಧ್ಯಕ್ಷರು ಸದಸ್ಯ ಕಾರ್ಯದರ್ಶಿ ಮತ್ತು ನಾಲ್ವರು ಸದಸ್ಯರಿರುತ್ತಾರೆ.

ಆ) ಆಯೋಗದ ಅಧ್ಯಕ್ಷರಿಗೆ ವೇತನ ಸಿಬ್ಬಂದಿ ವಾಹನ ಮತ್ತು ದೂರವಾಣಿಗಳನ್ನು ಒದಗಿಸಲಾಗಿದೆ. ಇತರ ಸದಸ್ಯರಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಪ್ರತಿ ಸಭೆಗೂ ರೂ. 1000.00 ಸಿಟ್ಟಿಂಗ್ ಫೀ ನೀಡಲಾಗುತ್ತದೆ.

ಇ) ಆಯೋಗದ ಕಾರ್ಯವ್ಯಾಪ್ತಿಯ ಸ್ಥೂಲ ವಿವರ ಈ ಕೆಳಗಿನಂತಿದೆ :

1. ವಾಣಿಜ್ಯ ತೆರಿಗೆಗಳು, ಅಬಕಾರಿ ಸುಂಕಗಳು, ಮುದ್ರಾಂಕ ಮತ್ತ ನೊಂದಣಿ ಮೇಲಿನ ಸುಂಕಗಳು ಮತ್ತು ವಾಹನ ತೆರಿಗೆಗಳ ತೆರಿಗೆ ವಿನ್ಯಾಸವನ್ನು ಅಧ್ಯಯನ ಮಾಡುವುದು.
2. ತೆರಿಗೆ ಸಂಗ್ರಹಣೆ ಪದ್ಧತಿಯನ್ನು ಸರಳ ಮತ್ತು ಪಾರದರ್ಶಕಗೊಳಿಸಿ ಉತ್ತಮವಾಗಿ ಅನುಸರಣೆಯಾಗುವಂತೆ ಮಾಡುವ ಸಲುವಾಗಿ ಈಗಿರುವ ವಿಧಾನಗಳನ್ನು ಅಧ್ಯಯನ ಮಾಡುವುದು,
3. ಪೂರ್ಣಪ್ರಮಾಣದ ತೆರಿಗೆ ಸಾಮರ್ಥ್ಯವನ್ನು ಪಡೆಯುವ ಸಲುವಾಗಿ ತೆರಿಗೆ ತಳಹದಿಯನ್ನು ವಿಸ್ತರಿಸಲು ಕ್ರಮಗಳನ್ನು ಶಿಫಾರಸ್ಸು ಮಾಡುವುದು.
4. ತೆರಿಗೆ ಸೋರುವಿಕೆಯನ್ನು ಹೆಚ್ಚು ಪರಿಣಾಮಕಾರಿಯಾಗಿ ತಡೆಗಟ್ಟಲು ಲಭ್ಯವಿರುವ ನಿವಾರಣಾ ಕ್ರಮಗಳ ಯೋಗ್ಯತೆ ಮತ್ತು ವ್ಯಾಪಾರ ವಹಿವಾಟು ವಿಧಾನಗಳನ್ನು ಅಧ್ಯಯನ ಮಾಡುವುದು.
5. ಮೇಲಿನ ತೆರಿಗೆಗಳಿಂದ ರಾಜ್ಯಕ್ಕೆ ಹೆಚ್ಚು ರಾಜಸ್ವವನ್ನು ಪಡೆಯಲು ಆಯೋಗವು ಸೂಕ್ತವೆಂದು ಭಾವಿಸುವ ಇತರ ಯಾವುದೇ ಕ್ರಮಗಳನ್ನು ಸಲಹೆ ಮಾಡುವುದು.

ಅಬಕಾರಿ ತೆರಿಗೆ ಕಟ್ಟದಿರುವವರ ಪರವಾನಿಗೆ ರದ್ದು ಮಾಡುವುದು

3234 - ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ತೆರಿಗೆ ಕಟ್ಟದೆ ಮಾರುಟ ಮಾಡುವ ಮದ್ಯದಂಗಡಿ ಮತ್ತು ಬಾರ್‌ಗಳ ಪರವಾನಗಿಯನ್ನು ಸರ್ಕಾರ ಅಮಾನತ್ತು ಮಾಡಲು ಕ್ರಮ ಕೈಗೊಂಡಿದೆಯೇ? ಮದ್ಯದ ಬಾಟಲ್‌ಗಳು ಯಾವ ಡಿಪ್ಪಿಲರಿಯಲ್ಲಿ ತಯಾರಾಗುತ್ತಿದೆಯೋ ಆ ಡಿಪ್ಪಿಲರಿಯ ಪರವಾನಗಿಯನ್ನು ಸರ್ಕಾರ ಅಮಾನತ್ತುಗೊಳಿಸುತ್ತದೆಯೇ?

ಆ) ಆ ಡಿಪ್ಪಿಲರಿಯಲ್ಲಿನ ಅಧಿಕಾರಿಯನ್ನು ಸರ್ಕಾರ ಅಮಾನತ್ತಿನಲ್ಲಿಡುತ್ತದೆಯೇ?

ಇ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) 2000-2001ನೇ ಸಾಲಿನಲ್ಲಿ 10 ಸನ್ನದುಗಳನ್ನು ಅಮಾನತ್ತಿನಲ್ಲಿಟ್ಟು ದಂಡ ವಿಧಿಸಿ ಪ್ರಕರಣವನ್ನು ನಿಯಮದ ಪ್ರಕಾರ ಇತ್ಯರ್ಥ ಪಡಿಸಲಾಗಿದೆ. ತನಿಖೆಯಿಂದ ಅಕ್ರಮ ಮದ್ಯ ಬಾಟಲುಗಳು ಇಂತಹುದೇ ಡಿಪ್ಪಿಲರಿಗೆ ಸಂಬಂಧಿಸಿದವುಗಳೆಂದು ಖಚಿತವಾಗಿರುವುದಿಲ್ಲ. ಕಾರಣ ಡಿಪ್ಪಿಲರಿ ಪರವಾನಗಿಯನ್ನು ರದ್ದುಪಡಿಸುವ ಪ್ರಮೇಯ ಉದ್ಭವಿಸುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಪೋಲೀಸರಿಗೆ ಗೃಹ ನಿರ್ಮಾಣ ಸೌಲಭ್ಯ

3235 - ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ರಾಜ್ಯದಲ್ಲಿರುವ ಒಟ್ಟು ಪೋಲೀಸ್ ಸಿಬ್ಬಂದಿಗಳ ಸಂಖ್ಯೆ ಎಷ್ಟು ? ಹುದ್ದೆವಾರು ವಿವರ ನೀಡುವುದು ?

2. ಈ ಸಿಬ್ಬಂದಿಗಳಿಗೆ ವಸತಿಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ? ಈ ದಿಸೆಯಲ್ಲಿ ಸರ್ಕಾರ ಯೋಜನೆ ಸಿದ್ಧಪಡಿಸಿದೆಯೇ ?

3. ಯೋಜನೆಯ ಪೂರ್ಣ ವಿವರಗಳನ್ನು ನೀಡುವುದು. ಯೋಜನೆಯ ಅಂದಾಜು ವೆಚ್ಚವೆಷ್ಟು ?

4. ಯೋಜನೆಗೆ ಅಗತ್ಯವಿರುವಷ್ಟು ಹಣವನ್ನು ಯಾವ ಮೂಲದಿಂದ ಪಡೆಯಲಾಗುವುದು ?

5. ಯೋಜನೆಯನ್ನು ಎಷ್ಟು ಹಂತಗಳಲ್ಲಿ ಎಷ್ಟು ವರ್ಷಗಳಲ್ಲಿ ಪೂರ್ಣಗೊಳಿಸಲಾಗುವುದು ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

1. ರಾಜ್ಯದಲ್ಲಿರುವ ಪೋಲೀಸ್ ಸಿಬ್ಬಂದಿಗಳ ಒಟ್ಟು ಮಂಜೂರಾತಿ ಬಲದ ಸಂಖ್ಯೆ 73,698, ಹುದ್ದೆವಾರು ವಿವರಗಳನ್ನು ಅನುಬಂಧ - ಅ ದಲ್ಲಿ ಒದಗಿಸಿದೆ.

2. ಹೌದು, ಪ್ರಸ್ತುತ ರಾಜ್ಯದಲ್ಲಿ 25,728 ಸಂಖ್ಯೆಯ ಪೋಲೀಸ್ ಸಿಬ್ಬಂದಿಗಳಿಗೆ ವಸತಿ ಗೃಹ ಸೌಲಭ್ಯವನ್ನು ಕಲ್ಪಿಸಲಾಗಿದೆ. ಪೋಲೀಸ್ ಸಿಬ್ಬಂದಿ ವರ್ಗದವರಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡಲು ಪ್ರತ್ಯೇಕವಾಗಿ ಕರ್ನಾಟಕ ರಾಜ್ಯ ಪೋಲೀಸ್ ಗೃಹ ನಿರ್ಮಾಣ ನಿಗಮವನ್ನು ಸ್ಥಾಪಿಸಿದೆ. "ತ್ವರಿತ ವಸತಿ ಕಾರ್ಯಕ್ರಮ ಯೋಜನೆ" ಅಡಿಯಲ್ಲಿ ಪೊಲೀಸ್ ಸಿಬ್ಬಂದಿಗಳಿಗೆ 5100 ವಸತಿಗೃಹಗಳನ್ನು ನಿರ್ಮಾಣ ಮಾಡಲು ಸರ್ಕಾರ ಮಂಜೂರಾತಿ ನೀಡಿರುತ್ತದೆ.